

ಯಾವುದೇ ಸ್ತರದ ರಾಜಕಾರಣಿಯನ್ನು ನೋಡಿದರೂ ದೊಡ್ಡ ಗ್ಲೋಬಿನಾಕಾರದ ಹೊಟ್ಟೆ ಕಂಗೊಳಿಸುತ್ತಲೇ ಇರುತ್ತದೆ.

ಅಳತೆ ಮೀರಿ ಬೆಳೆದ ಉದರವನ್ನು ಹೊತ್ತು ತಿರುಗುವುದು ಅಷ್ಟು ಚಂದವೆನಿಸುವುದಿಲ್ಲ. ಉದರ ಉದ್ದವಾದವರಿಗೆ ಇದನ್ನು ಕರಗಿಸಲೇಬೇಕೆಂಬ ಹಂಬಲ ಎದೆಯಲ್ಲಿ ಮೂಡುತ್ತದೆ. ಈ ಕಾರಣಕ್ಕೇನೇ ಎದೆಗೂ ಹೊಟ್ಟೆಗೂ ಆಗಿಬರುವುದಿಲ್ಲ ಅನಿಸುತ್ತದೆ. ಅದಕ್ಕೆಂದೇ ಎದೆಯುರಿ, ಹೊಟ್ಟೆಕಿಚ್ಚು ಎಂಬ ಪದಪ್ರಯೋಗಗಳು ಬಂದಿರಬೇಕು. ಕೆಲವರು 'ನೋಡಪಾ ನಾವು ರೊಕ್ಕ-ರೂಪಾಯಿ ಗಳಿಸಿಲ್ಲ, ನಮ್ಮ ಹೊಟ್ಟೀ ಬೆಳಿಸೀವಿ ನೋಡು' ಅಂತ ತುಂಬು ಬಸುರಿಯ ಹೊಟ್ಟೆಯನ್ನೂ ಮೀರಿಸುವಂಥ ತಮ್ಮ ಹೊಟ್ಟೆಯ ಮೇಲೆ ಕೈಯಾಡಿಸುತ್ತಾ ಅತ್ಯಂತ ಉದರಾಭಿಮಾನದಿಂದ ನುಡಿಯುತ್ತಾರೆ. ನಾನು ಮಾತ್ರ ಈ ಜಾಯಮಾನದವನಲ್ಲ!

ನನ್ನ ಅನೇಕ ದುಂಡೋದರ ಗೆಳೆಯರು ಬಹಳ ದಿನಗಳ ನಂತರ ಕಂಡಾಗ ಅದರಲ್ಲೂ ಅವರು ಇನ್‌ಶರ್ಟ್ ಮಾಡಿದ್ದರೆ ಆ ಚಹರೆಯಲ್ಲಿ ಡೊಳ್ಳುಹೊಟ್ಟೆಯೇ ಎದ್ದು ಕಾಣುತ್ತಲಿದ್ದರಿಂದ `ಅಣಾ.. ಈ ಹೊಟ್ಟಿ ಕರಗಿಸಪ್ಪಾ..' ಅಂತ ಆತ್ಮೀಯತೆಯಿಂದ ಹತ್ತಿರ ಹೋಗಿ ಹೊಟ್ಟಿ ಮೇಲೆ